
# ಆಹಾ ಸುದ್ದಿ!

★ ಸಸಿತೋಟ




ಉತ್ತರ ವೇಲ್ಸ್‌ನ ಥಾಮಸ್‌ಗೆ ಸ್ಕ್ರ್ಯಾಚ್ ಕಾರ್ಡ್ ಲಾಟರಿಯ ಹುಚ್ಚು. ಕಳೆದ 15 ವರ್ಷಗಳಿಂದ ಖರೀದಿಸಿ ಹಣ ನಷ್ಟ ಮಾಡಿಕೊಂಡ ಕಾರ್ಡ್‌ಗಳನ್ನೆಲ್ಲಾ ಇಟ್ಟುಕೊಂಡಿದ್ದಾನೆ. ಪ್ರತಿ ದಿನ ಬೆಳಿಗ್ಗೆ ಮೊದಲ ಕೆಲಸವೆಂದರೆ 10 ಪೌಂಡ್ ಮುಖಬೆಲೆಯ ಈ ಕಾರ್ಡ್ ಖರೀದಿಸುವುದು. ಜೀವಮಾನದ ಎಲ್ಲಾ ಉಳಿತಾಯವನ್ನು ಇದಕ್ಕೇ ವ್ಯಯಿಸಿರುವ ಈತ ಅತಿ ಹೆಚ್ಚಿನ 2.5 ಲಕ್ಷ ಪೌಂಡ್ ಬಹುಮಾನ ಪಡೆಯುವವರೆಗೂ ಈ ಚಟ ನಿಲ್ಲಿಸುವುದಿಲ್ಲ ಎಂದು ಶಪಥ ಮಾಡಿದ್ದಾನಂತೆ. ಚಟ್ಟಕ್ಕೇರುವವರೆಗೂ ಚಟ ಬಿಡುವುದಿಲ್ಲ ಎನ್ನುವವರಿಗಿಂತ ಥಾಮಸ್ ಮೇಲು.

ಮಲೇಷ್ಯಾದ ರಾಮ್ಲಿ ಎಂಬಾತ ತನ್ನ ಲೈಂಗಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ತಾತ್ಕಾಲಿಕ ವಯಾಗ್ರಾ ಮೊರೆ ಹೋಗಲಿಲ್ಲ, ಬದಲಾಗಿ ಶಾಶ್ವತ ಪರಿಹಾರವೆಂದು ಲೋಹದ 10 ಬಾಲ್ ಬೇರಿಂಗ್‌ಗಳನ್ನು ತನ್ನ ಮರ್ಮಾಂಗದೊಳಗೆ ತೂರಿಸಿಕೊಂಡಿದ್ದನಂತೆ. ಇದು ಆತನ ಸ್ನೇಹಿತನಿಂದ ಪಡೆದ ಉಚಿತ ಸಲಹೆ. ಆದರೆ ಕೆಲವೇ ತಿಂಗಳಲ್ಲಿ ಅದು ತಿರುಗುಮುರುಗಾಯಿತು. ಬಾಲ್ ಒಳಗೊಳಗೇ ತುಕ್ಕು ಹಿಡಿದು ರಾಮ್ಲಿಯ ಸಾಮರ್ಥ್ಯಕ್ಕೂ ತುಕ್ಕು ಹಿಡಿದಾಗ ವೈದ್ಯನ ಮೊರೆ ಹೋದನಂತೆ.



ವಾರ್ಷಿಕ ಇಗ್ನೊಬೆಲ್ ಪ್ರಶಸ್ತಿ ಸಮಾರಂಭ ಈಚೆಗೆ ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ನಡೆಯಿತು. ಮೂಗಿನಿಂದ ನೆತ್ತರು ಸುರಿದರೆ ತಡೆಯುವುದು ಹೇಗೆ ಎಂದು ಕೆಲವರು ಮಾಡಿದ ಸಂಶೋಧನೆಗೆ ಈ ಪ್ರಶಸ್ತಿ ಬಂತು. ಹಂದಿ ಮಾಂಸದ ಚೂರನ್ನು ಮೂಗಿಗೆ ತುರುಕುವುದರಿಂದ ರಕ್ತಸ್ರಾವ ತಡೆಯಬಹುದು ಎಂಬ ಸಂಶೋಧನೆಯನ್ನು ಈ ವ್ಯಕ್ತಿ ಪ್ರದರ್ಶಿಸುತ್ತಿದ್ದಾನೆ. ಸಂಶೋಧನೆಯನ್ನು ಉತ್ಪನ್ನಗಳನ್ನಾಗಿ ಮಾಡಿ ಮಾರಾಟ ಮಾಡಲು ಯಾರು ಮುಂದೆ ಬರುತ್ತಾರೋ!




ಜರ್ಮನಿಯ ಒಲಿವರ್ 27 ಬಿಯರ್ ಮಗ್‌ಗಳನ್ನು ಎರಡೂ ಕೈಯಲ್ಲಿ ಹಿಡಿದು 40 ಮೀಟರ್ ದೂರ ಕ್ರಮಿಸಿದನಂತೆ. ಇದು ಹೊಸ ಗಿನ್ನೆಸ್ ದಾಖಲೆ. ಸದ್ಯಕ್ಕೆ ಅಲ್ಲಿ ಅಕ್ಟೋಬರ್ ಫೆಸ್ಟ್ ಎಂಬ ವಾರ್ಷಿಕ ಬಿಯರ್ ಮೇಳ ನಡೆಯುತ್ತಿದೆ. ಒಂದೇ ದಿನದಲ್ಲಿ ಇದಕ್ಕಿಂತ ಹೆಚ್ಚು ಮಗ್ ಬಿಯರ್ ಕೈಯಲ್ಲಿ ಹಿಡಿದು ಹೊಟ್ಟೆಗೆ ಸೇರಿಸುವವರೂ ಇದ್ದಾರೆಂದ ಮೇಲೆ ಇದೇನು ಮಹಾ ದಾಖಲೆ!

ಫಿಲಿಡೆಲ್ಫಿಯಾದಲ್ಲಿ ಮುಸುಕುಧಾರಿಯೊಬ್ಬ ಸ್ವೆಟ್‌ಷರ್ಟ್‌ನ ಒಳಗಿಂದ ಪಿಸ್ತೂಲಿನಂತಹ ವಸ್ತುವಿನಿಂದ ಬೆದರಿಸಿ ಅಂಗಡಿಯಿಂದ ಹಣ ಕಸಿದುಕೊಂಡು ಪರಾರಿಯಾಗಿದ್ದ. ಪೊಲೀಸರು ಸಿಸಿ ಟಿ.ವಿ. ದೃಶ್ಯಗಳನ್ನು ಪರಿಶೀಲಿಸಿದ ಮೇಲೆ ಗೊತ್ತಾಯಿತು, ಆತ ಅದೇ ಅಂಗಡಿಯ ಕೌಂಟರ್‌ನಿಂದ ಬಾಳೆಹಣ್ಣು ತೆಗೆದುಕೊಂಡು ಷರ್ಟ್ ಒಳಗೆ ತೂರಿಸಿ ಪಿಸ್ತೂಲೆಂದು ಬೆದರಿಸಿದ್ದಾನೆಂದು. ಪೊಲೀಸರು ಈ ಬನಾನಾ ಕಳ್ಳನ ಹಿಂದೆ ಬಿದ್ದರೆ, ಜನ ಸಿಪ್ಪೆಯನ್ನು ಪೊಲೀಸರತ್ತ ಎಸೆದು ಕಿಸಿಕಿಸಿ ನಗುತ್ತಿದ್ದಾರಂತೆ.



ಇಟಲಿಯ ಆಲ್ಪ್ಸ್ ಪರ್ವತದಲ್ಲಿ ಅಂತರರಾಷ್ಟ್ರೀಯ ಹೈಲೈನ್ ಸಭೆ ನಡೆಯುತ್ತಿದೆ. ಕೆಲವರು ಎತ್ತರದಲ್ಲಿ ಹಗ್ಗಕ್ಕೆ ಕಟ್ಟಿದ ಜೋಲಿಯಲ್ಲಿ ಇಡೀ ದಿನ ಸಭೆ ನಡೆಸಿದರು. ನೈಸರ್ಗಿಕ ಕರೆಗೆ ಹೇಗೆ ಓಗೊಟ್ಟರೋ!